**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ : ಶ್ರೀ ಕೆ.ತೀರ್ಥಪ್ಪ, ಉಪ ನಿರ್ದೇಶಕರು (ನಿವೃತ್ತ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರ ವಿರುದ್ಧದ ದಂಡನಾದೇಶವನ್ನು ಭಾಗಶ: ಪರಿಷ್ಕರಿಸುವ ಬಗ್ಗೆ – ಆದೇಶ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ವಾಕೈ 144 ಕೈಸೇವಿ 2008 (ಭಾಗ-3), ದಿನಾಂಕ:04.03.2014.
2. ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಅರ್ಜಿ ಸಂಖ್ಯೆ: 3603/2014 ರಲ್ಲಿನ ಆದೇಶ ದಿನಾಂಕ: 28.02.2018.
3. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 14068/2021 ರಲ್ಲಿನ ಆದೇಶ ದಿನಾಂಕ: 15.02.2024.
4. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಸರ್ಕಾರಿ ವಕೀಲರ ಪತ್ರದ ಸಂಖ್ಯೆ: 39837/ಎಜಿಬಿ/ಡಬ್ಲ್ಯುಪಿ/24, ದಿನಾಂಕ: 16.04.2024.
5. ಅಪರ ನಿರ್ದೇಶಕರು (ಆಡಳಿತ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರ ಪತ್ರದ ಸಂಖ್ಯೆ: DIC-LMI0ADM/28/2022-E-662469, ದಿನಾಂಕ: 11.03.2024.
6. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 19325/2022 ರಲ್ಲಿನ ಆದೇಶ ದಿನಾಂಕ: 31.05.2023.
7. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಸರ್ಕಾರಿ ವಕೀಲರ ಪತ್ರದ ಸಂಖ್ಯೆ: 10955/ಎಜಿಬಿ/ಡಬ್ಲ್ಯುಪಿ/23-24, ದಿನಾಂಕ:26.06.2023.

*****

**ಪ್ರಸ್ತಾವನೆ:**

ಶ್ರೀ ಕೆ.ತೀರ್ಥಪ್ಪ, ಉಪ ನಿರ್ದೇಶಕರು (ನಿವೃತ್ತ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರು ಈ ಹಿಂದೆ ಬೆಂಗಳೂರು ಗ್ರಾಮಾಂತರ ಜಿಲ್ಲೆ ಸರಬರಾಜು ಮತ್ತು ಮಾರಾಟ ಸಹಕಾರ ಸಂಘ ಇಲ್ಲಿ ವ್ಯವಸ್ಥಾಪಕ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ 17 ಜಿಲ್ಲೆಗಳಲ್ಲಿ ಐ.ಪಿ.ಪಿ ಯೋಜನೆಯಡಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಅವಶ್ಯವಿದ್ದ 2000 ಟೀಕ್ ವುಡ್ (ಸಾಗುವಾನಿ) ಮರದ ಬೆಂಚುಗಳನ್ನು ಸರಬರಾಜು ಮಾಡಿದ ಸಂಬಂಧ ನಿಯಮಗಳನ್ನು ಪಾಲಿಸದೇ ಅಧಿಕಾರದ ದುರುಪಯೋಗ / ಕರ್ತವ್ಯ ಲೋಪ / ನಿರ್ಲಕ್ಷ್ಯತೆ / ಹಣಕಾಸಿನಲ್ಲಿ ಅವ್ಯವಹಾರ ಎಸಗಿ ಶೇಖಡ 70% ರಿಂದ 90% ರಷ್ಟು ಸರಬರಾಜಾದ ಪೀಠೋಪಕರಣಗಳು ಜಂಗಲ್ ವುಡ್‌ನಿಂದ ಮಾಡಿರುವುದರಿಂದ ಸರ್ಕಾರಕ್ಕೆ ಸುಮಾರು 28.86 ಲಕ್ಷ ನಷ್ಟ ಉಂಟಾಗಿರುತ್ತದೆ. ಈ ಸಂಬಂಧ ಸದರಿಯವರ ಕರ್ತವ್ಯ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿಯಿಂದ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟಾಗಿದ್ದು, ಸದರಿಯವರ ವಿರುದ್ಧ ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿನ ಸರ್ಕಾರದ ಆದೇಶದಲ್ಲಿ ಈ ಕೆಳಕಂಡ ದಂಡನೆಗಳನ್ನು ವಿಧಿಸಿ ಆದೇಶಿಸಲಾಗಿರುತ್ತದೆ.

1. ಸರ್ಕಾರಕ್ಕೆ ಉಂಟಾಗಿರುವ ಆರ್ಥಿಕ ನಷ್ಟ ರೂ.28.86 ಲಕ್ಷಗಳಲ್ಲಿ ಶೇಕಡ 50 ರಷ್ಟು ಅಂದರೆ ರೂ.14.43ಲಕ್ಷಗಳನ್ನು (ರೂ ಹದಿನಾಲ್ಕು ಲಕ್ಷದ ನಲವತ್ತೂರು ಸಾವಿರ ಮಾತ್ರ) ಬಡ್ಡಿ ಸಮೇತ ಭೂ ಕಂದಾಯ ಬಾಕಿ ಎಂದು ಪರಿಗಣಿಸಿ ಆಪಾದಿತ ಅಧಿಕಾರಿಯಿಂದ ವಸೂಲಾತಿ ಮಾಡಲು ಸರ್ಕಾರವು ಆದೇಶಿಸಿದೆ.
2. ಅಧಿಕಾರಿಯ ಪಿಂಚಣಿಯ ಅರ್ಧದಷ್ಟು ಮುಟ್ಟುಗೋಲು ಹಾಕಿಕೊಳ್ಳಲು ಕೆ.ಸಿ.ಎಸ್ ನಿಯಮ 214 (1) (ಎ) (ಬಿ) ರನ್ವಯ ಸರ್ಕಾರವು ಆದೇಶಿಸಿದೆ.
3. ಸದರಿ ಅಧಿಕಾರಿಯ ವಿರುದ್ಧ ಸಿವಿಲ್/ಕ್ರಿಮಿನಲ್ ಮೊಕದ್ದಮೆ ಹೂಡಲು ಸರ್ಕಾರವು ಆದೇಶಿಸಿದೆ.
4. ಐಪಿಪಿ ಯೋಜನೆಯಡಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಕಳಪೆ ಗುಣಮಟ್ಟದ ಪೀಠೋಪಕರಣಗಳನ್ನು ಸರಬರಾಜು ಮಾಡಿದ ಮೆ: ವಿನಾಯಕ ಇಂಡಸ್ಟ್ರೀಸ್, ಶಿವಮೊಗ್ಗ ಹಾಗೂ ಮೆ:ರಾಜು ಇಂಡಸ್ಟ್ರೀಸ್, ಶಿವಮೊಗ್ಗ ಈ ವಾಣಿಜ್ಯ ಸಂಸ್ಥೆಗಳನ್ನು ಕಪ್ಪು ಪಟ್ಟಿಗೆ ಸೇರಿಸಲು ಸರ್ಕಾರವು ಆದೇಶಿಸಿದೆ.

--2

4/6/24

ಶ್ರೀ ಕೆ.ತೀರ್ಥಪ್ಪ, ಉಪ ನಿರ್ದೇಶಕರು (ನಿವೃತ್ತ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಸರ್ಕಾರದ ಆದೇಶವನ್ನು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿ ಸಂಖ್ಯೆ: 3603/2014 ರಲ್ಲಿ ಪ್ರಶ್ನಿಸಿರುತ್ತಾರೆ. ಮಾನ್ಯ ನ್ಯಾಯಾಲಯವು ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿನ ದಿನಾಂಕ:28.02.2018 ರ ಆದೇಶದಲ್ಲಿ ಸರ್ಕಾರದ ದಂಡನಾದೇಶದಲ್ಲಿ ಕ್ರಮಬದ್ಧತೆಗೆ ಹೊರತಾದ ಮತ್ತು ಕಾನೂನು ಬಾಹಿರವಾದ ಯಾವುದೇ ಅಂಶಗಳು ಕಂಡುಬಂದಿಲ್ಲವೆಂದು ತೀರ್ಮಾನಿಸಿ ಅರ್ಜಿಯನ್ನು ವಜಾಗೊಳಿಸಿರುತ್ತದೆ.

ಶ್ರೀ ಕೆ. ತೀರ್ಥಪ್ಪ, ಉಪ ನಿರ್ದೇಶಕರು (ನಿವೃತ್ತ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರು ಕರ್ನಾಟಕ ಆಡಳಿತ ನ್ಯಾಯಮಂಡಳಿಯು ಅರ್ಜಿ ಸಂಖ್ಯೆ: 3603/2014ರಲ್ಲಿ ದಿನಾಂಕ: 28.02.2018 ರಂದು ನೀಡಿರುವ ಆದೇಶದ ವಿರುದ್ಧ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: W.P.No:14068/2021 (KAT-S) ನ್ನು ದಾಖಲಿಸಿರುತ್ತಾರೆ. ರಿಟ್ ಅರ್ಜಿ ಸಂಖ್ಯೆ: 14068/2021 ರಲ್ಲಿನ ಮೇಲೆ ಓದಲಾದ ಕ್ರಮ ಸಂಖ್ಯೆ (3)ರಲ್ಲಿನ ದಿನಾಂಕ:15.02.2024ರ ಆದೇಶದಲ್ಲಿ ಮಾನ್ಯ ಕರ್ನಾಟಕ ರಾಜ್ಯ ಉಚ್ಛ ನ್ಯಾಯಾಲಯವು ಈ ಕೆಳಕಂಡಂತೆ ಆದೇಶಿಸಿರುತ್ತದೆ.

> "In view of the above, this Writ Petition succeeds in part and a Writ of Certiorari issues quashing the Tribunal's order with the following directions:
>
> i) The Order of Punishment dated 03.04.2014 is modified only to the effect that the withholding of pension shall be 5% instead of 50% and that, rest of the punishment/penalty would remain intact.
>
> ii) The Respondents are directed to pay back to the Petitioner excess amount recovered from pension, within three months.
>
> Delay in refund will carry interest at the rate of 2% per mensum and the interest amount can be recovered by the State from the erring officials personally, in accordance with law. Costs made easy"

ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದ ಸರ್ಕಾರಿ ವಕೀಲರ ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಪತ್ರದೊಂದಿಗೆ ರಿಟ್ ಅರ್ಜಿ ಸಂಖ್ಯೆ: 14068/2021ರ ಆದೇಶದ ದೃಢೀಕೃತ ಪ್ರತಿ ಹಾಗೂ ಅದಕ್ಕೆ ಸಂಬಂಧಿಸಿದಂತೆ ಸರ್ಕಾರಿ ವಕೀಲರ ಅಭಿಪ್ರಾಯವು ಸ್ವೀಕೃತವಾಗಿದ್ದು, ಸದರಿ ಆದೇಶದ ವಿರುದ್ಧ ಮಾನ್ಯ ಭಾರತದ ಸರ್ವೋಚ್ಛ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲು ಯೋಗ್ಯ ಪ್ರಕರಣವಾಗಿರುವುದಿಲ್ಲವೆಂದು ಈ ಕೆಳಕಂಡಂತೆ ಅಭಿಪ್ರಾಯ ನೀಡಿರುತ್ತಾರೆ.

> "After hearing the counsel for the petitioner and the undersigned on behalf of the respondents - State at length, the Hon'ble Court, while upholding the finding of guilt, deemed it appropriate to interfere with the aforesaid penalty on the ground of proportionately. The said judgment and order dated 15.2.2024 of the Division Bench of High Court of Karnataka, confirming the findings of guilt and interfering with the penalty is in accordance with settled principle of law of proportionality and therefore calls for no further action by the State. Hence, it is not a fit case for being carried to the Hon'ble Supreme Court in appeal."

ಮಾನ್ಯ ನ್ಯಾಯಾಲಯದ ದಿನಾಂಕ: 15.02.2024ರ ಆದೇಶವು ಸಮಂಜಸವಾಗಿರುವ ಹಿನ್ನೆಲೆಯಲ್ಲಿ, ಸರ್ಕಾರಿ ವಕೀಲರ ಅಭಿಪ್ರಾಯವನ್ನು ಒಪ್ಪಬಹುದಾಗಿದ್ದು, **"ಈ ಪ್ರಕರಣವು ಮೇಲ್ಮನವಿ ಸಲ್ಲಿಸಲು ಅರ್ಹ ಪ್ರಕರಣವಲ್ಲ"** ಎಂದು ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯು ದಿನಾಂಕ:13.05.2024 ರ ಹಿಂಬರಹದಲ್ಲಿ ಅಭಿಪ್ರಾಯ ನೀಡಿರುತ್ತದೆ.

ಅಪರ ನಿರ್ದೇಶಕರು (ಆಡಳಿತ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರ ಮೇಲೆ ಓದಲಾದ ಕ್ರಮ ಸಂಖ್ಯೆ (5)ರ ಪತ್ರದಲ್ಲಿ, ರಿಟ್ ಅರ್ಜಿ ಸಂಖ್ಯೆ: 14068/2021 ರಲ್ಲಿನ ದಿನಾಂಕ:15.02.2024ರ ಆದೇಶದ ಹಿನ್ನೆಲೆಯಲ್ಲಿ ದಂಡನಾದೇಶ ಸಂಖ್ಯೆ: ವಾಕೈ 144 ಕೈಸೇವಿ 2008 (ಭಾಗ-3), ದಿನಾಂಕ:04.03.2014ನ್ನು ಪರಿಷ್ಕರಿಸುವಂತೆ ಕೋರಿರುತ್ತಾರೆ.

ಮುಂದುವರೆದು, ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿನ ಸರ್ಕಾರದ ಆದೇಶದಲ್ಲಿನ ಕ್ರಮ ಸಂಖ್ಯೆ: 3 ರಲ್ಲಿ ಶ್ರೀ ಕೆ. ತೀರ್ಥಪ್ಪ, ಉಪ ನಿರ್ದೇಶಕರು (ನಿವೃತ್ತ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರ ವಿರುದ್ಧ ಸಿವಿಲ್/ಕ್ರಿಮಿನಲ್ ಮೊಕದ್ದಮೆ ಹೂಡಲು ಸರ್ಕಾರವು ಆದೇಶಿಸಿದೆ. ಇದಕ್ಕೆ ಸಂಬಂಧಿಸಿದಂತೆ ಸದರಿ ಅಧಿಕಾರಿಯವರ ವಿರುದ್ಧ ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಯಲ್ಲಿ ಮೊ.ಸಂ.80/2021 ಕಲಂ 409, 420 ಐ.ಪಿ.ಸಿ ರೀತ್ಯಾ ಪ್ರಕರಣ ದಾಖಲಾಗಿರುತ್ತದೆ. ಪೊಲೀಸ್ ಇನ್ಸ್‌ಪೆಕ್ಟರ್, ಕಬ್ಬನ್ ಪಾರ್ಕ್ ಪೊಲೀಸ್ ಠಾಣೆ ಇವರು ಹೊರಡಿಸಿರುವ ದಿನಾಂಕ: 20.10.2021 ಮತ್ತು 13.09.2022ರ ನೋಟೀಸ್ ಗಳ ವಿರುದ್ಧ ಶ್ರೀ ಕೆ. ತೀರ್ಥಪ್ಪ, ಉಪ ನಿರ್ದೇಶಕರು (ನಿವೃತ್ತ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: W.P.No:19325/2022 ನ್ನು ಸಲ್ಲಿಸಿರುತ್ತಾರೆ. ರಿಟ್ ಅರ್ಜಿ ಸಂಖ್ಯೆ: 19325/2022 (ಜಿಎಂ-ಪೊಲೀಸ್) ರ ಮೇಲೆ ಓದಲಾದ ಕ್ರಮ ಸಂಖ್ಯೆ (6)ರಲ್ಲಿನ ದಿನಾಂಕ:31.05.2023ರ ಆದೇಶದಲ್ಲಿ "The writ petition is allowed; a Writ of Certiorari issues quashing the impugned Notices. The 2nd Respondent is hereby warned to ensure that such things do not happen at his hands in the future" ಎಂದು ಆದೇಶಿಸಲಾಗಿದೆ.

ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಸರ್ಕಾರಿ ವಕೀಲರ ಮೇಲೆ ಓದಲಾದ ಕ್ರಮ ಸಂಖ್ಯೆ (7)ರ ಪತ್ರದೊಂದಿಗೆ ರಿಟ್ ಅರ್ಜಿ ಸಂಖ್ಯೆ: 19325/2022 (ಜಿಎಂ-ಪೊಲೀಸ್) ರ ಆದೇಶದ ದೃಢೀಕೃತ ಪ್ರತಿ ಹಾಗೂ ಅದಕ್ಕೆ ಸಂಬಂಧಿಸಿದಂತೆ ಸರ್ಕಾರಿ ವಕೀಲರ ಅಭಿಪ್ರಾಯವು ಸ್ವೀಕೃತವಾಗಿದ್ದು, ಸದರಿ ಆದೇಶದಲ್ಲಿ ಸರ್ಕಾರದ ವಿರುದ್ಧ ಯಾವುದೇ ಪ್ರತಿಕೂಲ ಆದೇಶ ಇಲ್ಲದೆ ಇರುವುದರಿಂದ ಇದು ಮೇಲ್ಮನವಿ ಸಲ್ಲಿಸಲು ಯೋಗ್ಯ ಪ್ರಕರಣವಾಗಿರುವುದಿಲ್ಲವೆಂದು ಅಭಿಪ್ರಾಯ ನೀಡಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ರಿಟ್ ಅರ್ಜಿ ಸಂಖ್ಯೆ: 14068/2021 ರಲ್ಲಿನ ದಿನಾಂಕ:15.02.2024ರ ಆದೇಶ ಮತ್ತು ರಿಟ್ ಅರ್ಜಿ ಸಂಖ್ಯೆ: 19325/2022 ರಲ್ಲಿನ ದಿನಾಂಕ:31.05.2023ರ ಆದೇಶಗಳನ್ನು ಪಾಲಿಸಲು ತೀರ್ಮಾನಿಸಿ, ಸದರಿ ಆದೇಶದನ್ವಯ ಸಂಖ್ಯೆ: ವಾಕೈ 144 ಕೈಸೇವಿ 2008 (ಭಾಗ-3), ದಿನಾಂಕ:04.03.2014ನ್ನು ಭಾಗಶಃ ಪರಿಷ್ಕರಿಸಿ ಸದರಿ ಆದೇಶ ಭಾಗದ ಕ್ರಮ ಸಂಖ್ಯೆ: 2 ರಲ್ಲಿನ "ಅಧಿಕಾರಿಯ ಪಿಂಚಣಿಯ ಅರ್ಧದಷ್ಟು ಮುಟ್ಟುಗೋಲು ಹಾಕಿಕೊಳ್ಳಲು ಕೆ.ಸಿ.ಎಸ್ ನಿಯಮ 214 (1) (ಎ) (ಬಿ) ರನ್ವಯ ಸರ್ಕಾರವು ಆದೇಶಿಸಿದೆ" ಎಂಬುದರ ಬದಲಾಗಿ ಅಧಿಕಾರಿಯ ಪಿಂಚಣಿಯ ಶೇ.5% ರಷ್ಟನ್ನು ಮುಟ್ಟುಗೋಲುಹಾಕಿಕೊಂಡು, ಈಗಾಗಲೇ ನಿವೃತ್ತ ಅಧಿಕಾರಿಯವರ ಪಿಂಚಣಿಯಿಂದ ವಸೂಲಾತಿ ಮಾಡಿರುವ 45% ಪಿಂಚಣಿ ಮೊತ್ತವನ್ನು ನಿವೃತ್ತ ಅಧಿಕಾರಿಯವರಿಗೆ ವಾಪಸ್ಸು ಪಾವತಿಸಲು ಹಾಗೂ ಸದರಿಯವರ ವಿರುದ್ಧ ಕ್ರಿಮಿನಲ್ / ಸಿವಿಲ್ ಮೊಕದ್ದಮೆ ಹೂಡಲು ಆದೇಶಿಸಿರುವುದನ್ನು ಹಿಂಪಡೆಯಲು ಸರ್ಕಾರವು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ವಾಕೈ 144 ಕೈಸೇವಿ 2008 (ಭಾಗ-3), ಬೆಂಗಳೂರು ದಿನಾಂಕ: 04.06.2024.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಿಟ್ ಅರ್ಜಿ ಸಂಖ್ಯೆ: 14068/2021 ರಲ್ಲಿನ ದಿನಾಂಕ:15.02.2024ರ ಆದೇಶದಂತೆ ಶ್ರೀ ಕೆ.ತೀರ್ಥಪ್ಪ, ಉಪ ನಿರ್ದೇಶಕರು (ನಿವೃತ್ತ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರ ವಿರುದ್ಧದ ದಂಡನಾದೇಶ ಸಂಖ್ಯೆ: ವಾಕೈ 144 ಕೈಸೇವಿ 2008 (ಭಾಗ-3), ದಿನಾಂಕ:04.03.2014ನ್ನು ಭಾಗಶಃ ಮಾರ್ಪಡಿಸಿ, ಸದರಿ ಆದೇಶದಲ್ಲಿನ ಆದೇಶ ಭಾಗದ ಕ್ರಮ ಸಂಖ್ಯೆ: 2 ರಲ್ಲಿನ "ಅಧಿಕಾರಿಯ ಪಿಂಚಣಿಯ ಅರ್ಧದಷ್ಟು ಮುಟ್ಟುಗೋಲು ಹಾಕಿಕೊಳ್ಳಲು ಕೆ.ಸಿ.ಎಸ್ ನಿಯಮ 214 (1) (ಎ) (ಬಿ) ರನ್ವಯ ಸರ್ಕಾರವು ಆದೇಶಿಸಿದೆ" ಎಂಬುದರ ಬದಲಾಗಿ "ಅಧಿಕಾರಿಯ ಪಿಂಚಣಿಯ ಶೇ.5% ರಷ್ಟನ್ನು ಮುಟ್ಟುಗೋಲು ಹಾಕಿಕೊಂಡು, ಈಗಾಗಲೇ ನಿವೃತ್ತ ಅಧಿಕಾರಿಯವರ ಪಿಂಚಣಿಯಿಂದ ವಸೂಲಾತಿ ಮಾಡಿರುವ ಶೇಕಡ 45% ಪಿಂಚಣಿ ಮೊತ್ತವನ್ನು ನಿವೃತ್ತ ಅಧಿಕಾರಿಯವರಿಗೆ ವಾಪಸ್ಸು ಪಾವತಿಸುವಂತೆ" ಆದೇಶಿಸಿದೆ.

--4

ಮುಂದುವರೆದು, ರಿಟ್ ಅರ್ಜಿ ಸಂಖ್ಯೆ: 19325/2022 ರಲ್ಲಿನ ದಿನಾಂಕ:31.05.2023ರ ಆದೇಶದನ್ವಯ ದಂಡನಾದೇಶ ಸಂಖ್ಯೆ: ವಾಕೈ 144 ಕೈಸೇವಿ 2008 (ಭಾಗ-3), ದಿನಾಂಕ:04.03.2014 ರಲ್ಲಿನ ಆದೇಶ ಭಾಗದ ಕ್ರಮ ಸಂಖ್ಯೆ: 3 ರಲ್ಲಿನ "ಸದರಿ ಅಧಿಕಾರಿಯ ವಿರುದ್ಧ ಸಿವಿಲ್/ಕ್ರಿಮಿನಲ್ ಮೊಕದ್ದಮೆ ಹೂಡಲು ಸರ್ಕಾರವು ಆದೇಶಿಸಿದೆ" ಎಂಬ ದಂಡನೆಯನ್ನು ರದ್ದುಗೊಳಿಸಲಾಗಿದೆ.

ಉಳಿದಂತೆ, ಸರ್ಕಾರದ ಆದೇಶ ಸಂಖ್ಯೆ: ವಾಕೈ 144 ಕೈಸೇವಿ 2008 (ಭಾಗ-3), ದಿನಾಂಕ:04.03.2014ರಲ್ಲಿನ ಆದೇಶ ಭಾಗದ ಕ್ರಮ ಸಂಖ್ಯೆ: 1 ಮತ್ತು 4 ರಲ್ಲಿನ ದಂಡನೆಗಳು ಯಥಾವತ್ತಾಗಿ ಮುಂದುವರೆಯುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
11/6/24
(ಸಿ.ವಿ.ಹರಿದಾಸನ್)
ಸರ್ಕಾರದ ಅಧೀನ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ
(ಸೇವೆಗಳು ಮತ್ತು ಸಮನ್ವಯ)

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಬೆಂಗಳೂರು-01
2. ಕೈಗಾರಿಕಾಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶನಾಲಯ ನಂ.49, ಖನಿಜ ಭವನ, ಡಿ.ದೇವರಾಜ ಅರಸು ರಸ್ತೆ, ಬೆಂಗಳೂರು-01
3. ಅಪರ ನಿರ್ದೇಶಕರು (ಆಡಳಿತ), ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶನಾಲಯ ನಂ.49, ಖನಿಜ ಭವನ, ಡಿ.ದೇವರಾಜ ಅರಸು ರಸ್ತೆ, ಬೆಂಗಳೂರು-01.
4. ಶ್ರೀ ಕೆ. ತೀರ್ಥಪ್ಪ, ಉಪ ನಿರ್ದೇಶಕರು (ನಿವೃತ್ತ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ನಂ.3, ಕೆಹೆಚ್‌ಬಿ ಕಾಲೋನಿ, ನಂದಿನಿ ಲೇಔಟ್, ಬೆಂಗಳೂರು – 560096
5. ಶಾಖಾ ರಕ್ಷಾ ಕಡತ : ಹೆಚ್ಚುವರಿ ಪ್ರತಿಗಳು

**ಪ್ರತಿಯನ್ನು:**

1. ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ } ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ
3. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು }